ಆ) ಮೆ: ಜಿಯೋ ಮೈಸೂರ್ ಸರ್ವೀಸಸ್ (ಇಂಡಿಯಾ) ಪ್ರೈ. ಲಿಮಿಟೆಡ್, ಮೆ: ರಿಯೋ ಟೆಂಟೋ ಎಕ್ಸ್‌ಪ್ಲೋರೇಷನ್ಸ್ ಸರ್ವೀಸಸ್ ಮತ್ತು ಮೆ: ಇಂಡೋಫಿಲ್ ರಿಸೋರ್ಸಸ್ ಎಕ್ಸ್‌ಪ್ಲೋರೇಷನ್ಸ್ ಸರ್ವೀಸಸ್(ಇಂಡಿಯಾ) ಲಿಮಿಟೆಡ್‌ರವರಿಗೆ ರೆಕನ್ನೈಸೆನ್ಸ್ ಪರ್ಮಿಟ್ ನೀಡಲಾಗಿದೆ. ಸದರಿಯವರಿಗೆ ಸರ್ಕಾರದಿಂದ ಯಾವುದೇ ಹಣ ನೀಡಲಾಗುತ್ತಿಲ್ಲ. ರೆಕನ್ನೈಸೆನ್ಸ್ ಪರ್ಮಿಟ್ ನೀಡಲು ಅರ್ಜಿದಾರರಿಂದಲೇ ಅರ್ಜಿ ಶುಲ್ಕ ಮತ್ತು ಪರ್ಮಿಟ್ ಶುಲ್ಕವನ್ನು ಸರ್ಕಾರಕ್ಕೆ ಪಡೆಯಲಾಗಿದೆ.

ಇ) ಪೂರ್ವೇಕ್ಷಣಾ ಪರವಾನಗಿ ನೀಡುವ ಸಂದರ್ಭದಲ್ಲಿ ಯಾರದ್ದೂ ವಿರೋಧ ಇರಲಿಲ್ಲ. ಆದರೆ, ಇತ್ತೀಚೆಗೆ ಹಟ್ಟಿ ಚಿನ್ನದ ಗಣಿ ಕಂಪೆನಿ ನಿಯಮಿತ ಸಂಸ್ಥೆಯ ಕಾರ್ಮಿಕರು ಹಾಗೂ ಸ್ಥಳೀಯ ಜನರು ಈ ಪರವಾನಗಿ ನೀಡಿರುವುದನ್ನು ವಿರೋಧಿಸುತ್ತಿದ್ದಾರೆ. ಈ ದೂರು ಸರ್ಕಾರದ ಪರಿಶೀಲನೆಯಲ್ಲಿದೆ. ಸದರಿ ಸಂಸ್ಥೆಗಳಿಗೆ ಪೂರ್ವೇಕ್ಷಣಾ ಸರ್ವೇ ಕಾರ್ಯ ಕೈಗೊಳ್ಳಲು MM(D&R) ಕಾಯ್ದೆ, 1957 ಮತ್ತು MCR, 1960ರ ನಿಯಮಗಳನುಸಾರ ಮತ್ತು ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಪೂರ್ವಾನುಮತಿ ಪಡೆದು ಪೂರ್ವೇಕ್ಷಣಾ ಪರವಾನಿಗೆ ನೀಡಲಾಗಿದೆ.

ಈ) ಹಟ್ಟಿ ಚಿನ್ನದ ಗಣಿ ಕಂಪೆನಿ ನಿಯಮಿತ ಸಂಸ್ಥೆಯು 1. ಚಿಕ್ಕನಾಯಕನಹಳ್ಳಿ 2. ಗದಗ 3. ಹಾವೇರಿ, ದಾವಣಗೆರೆ, ಶಿವಮೊಗ್ಗ ಪ್ರದೇಶಗಳಲ್ಲಿ ಪೂರ್ವೇಕ್ಷಣಾ ಪರವಾನಗಿ ಕೋರಿ ಸಲ್ಲಿಸಿದ್ದ ಅರ್ಜಿಗಳಿಗೆ ಪರವಾನಗಿಯನ್ನು ನೀಡಲಾಗಿದೆ.

ಉ) ಉದ್ಭವಿಸುವುದಿಲ್ಲ.

ತಮಿಳುನಾಡಿನ ಈರೋಡಿನಿಂದ ಕೀಳುದರ್ಜೆಯ ಹಾಲು ಬೆಂಗಳೂರಿಗೆ ಸರಬರಾಜಾಗುತ್ತಿರುವುದು

3654(4155) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನೆರೆ ರಾಜ್ಯವಾದ ತಮಿಳುನಾಡಿನ ಈರೋಡಿನಿಂದ ಕೀಳುದರ್ಜೆಯ ಕಲಬೆರಕೆ ಹಾಲು ಬೆಂಗಳೂರಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಬರುತ್ತಿರುವ ಈ ಹಾಲಿನ ಪ್ರಮಾಣವೆಷ್ಟು;

ಇ) ಈ ಮೊದಲು ಕಲಬೆರಕೆ ಹಾಲನ್ನು ಹಿಡಿದು ದಂಡೆಕೋರರನ್ನು ಬಂಧಿಸಿದ ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿಗಳನ್ನು ವರ್ಗಾವಣೆ ಮಾಡಿರುವುದು ನಿಜವೇ;

ಈ) ಈರೋಡಿನಿಂದ ಬರುತ್ತಿರುವ ಈ ಕಲಬೆರಕೆ ಹಾಲಿನ ಮಾರಾಟದ ದಂಧೆಯಲ್ಲಿ ಸ್ಥಳೀಯ ಪ್ರಮುಖ ರಾಜಕೀಯ ನಾಯಕರ ಕೈವಾಡವಿರುವುದು ನಿಜವೇ;

ಉ) ಇದ್ದರೆ ಈ ಕಲಬೆರಕೆ ಹಾಲಿನ ಪೂರೈಕೆಯನ್ನು ನಿಲ್ಲಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

ಆ) ನಿಖರ ಪ್ರಮಾಣ ದೊರಕಿರುವುದಿಲ್ಲ.

ಇ) ಹಿಂದಿನ ಆರೋಗ್ಯಾಧಿಕಾರಿಯವರ ಸ್ವಂತ ಕೋರಿಕೆ ಮೇರೆಗೆ ಅವರ ಮಾತೃ ಇಲಾಖೆಗೆ ಹಿಂದಿರುಗಿಸಲಾಗಿದೆ.

ಈ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) ಮಹಾನಗರ ಪಾಲಿಕೆಯಲ್ಲಿರುವ ಆರೋಗ್ಯ ಪರಿವೀಕ್ಷಕರು ಆಗಿಂದಾಗ್ಗೆ ಹಾಲಿನ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಿ ಕಲಬೆರಕೆ ಎಂದು ದೃಢೀಕರಿಸಲ್ಪಟ್ಟ ಹಾಲಿನ ಪ್ರಕರಣಗಳಲ್ಲಿ ಆಹಾರ ಕಲಬೆರಕೆ ತಡೆಗಟ್ಟುವ ಕಾಯಿದೆಯಡಿಯಲ್ಲಿ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ. ಕಲಬೆರಕೆ ಎಂದು ಗುರುತಿಸಲ್ಪಟ್ಟ ಹಾಲನ್ನು ಸ್ಥಳದಲ್ಲೆ ನಾಶಪಡಿಸಲಾಗುತ್ತಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಡಲ್ಕೊರೆತದಿಂದಾಗಿ ಆಸ್ತಿ ಹಾನಿಯಾಗಿರುವುದು

3655(4156) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಡಲ್ಕೊರೆತದಿಂದಾಗಿ ಅಪಾರವಾದ ಆಸ್ತಿ ಹಾನಿಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಈ ಕಡಲ್ಕೊರೆತವನ್ನು ತಪ್ಪಿಸಲು ಕೈಗೊಂಡಿರುವ ಕ್ರಮವೇನು; (ವಿವರ ನೀಡುವುದು);

ಇ) ಇದಕ್ಕಾಗಿ ಖರ್ಚು ಮಾಡಿರುವ ಹಣ ಎಷ್ಟು;

ಈ) ಕಡಲ್ಕೊರೆತವನ್ನು ತಪ್ಪಿಸಲು ನಡೆಯುತ್ತಿರುವ ಕಾಮಗಾರಿಯು ಕಳಪೆಯಿಂದ ಕೂಡಿರುವುದಾಗಿ ಸ್ಥಳೀಯರು ಆರೋಪಿಸುತ್ತಿರುವುದು ನಿಜವೇ;

ಉ) ನಿಜವಾಗಿದ್ದರೆ ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು;

ಊ) ಕಡಲ್ಕೊರೆತವನ್ನು ಶಾಶ್ವತವಾಗಿ ತಪ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ವಸಂತ ವಿ.ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು):

ಅ) ಬಂದಿರುತ್ತದೆ.

ಆ) ಕಡಲ ಕೊರೆತವನ್ನು ತಪ್ಪಿಸಲು ಸೆಂಟ್ರಲ್ ವಾಟರ್ ಮತ್ತು ಪವರ್ ರೀಸರ್ಚ್ ಸ್ಟೇಷನ್ (C.W.P.R.S.) ಪುಣೆ ಹಾಗೂ ಕರ್ನಾಟಕ ಇಂಜಿನಿಯರಿಂಗ್ ರೀಸರ್ಚ್ ಸ್ಟೇಷನ್ (K.E.R.S.) ಮೈಸೂರು ಇವರು ನೀಡಿದ ಸಲಹೆ ಹಾಗೂ ವಿನ್ಯಾಸದಂತೆ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಪ್ರದೇಶಗಳಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲಾಗುತ್ತಿದೆ. ಈವರೆಗೆ ರಾಜ್ಯದ ಕರಾವಳಿ ತೀರದ ವಿವಿಧ ಪ್ರದೇಶಗಳಲ್ಲಿ ಒಟ್ಟು 48.26 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ.

ಮಳೆಗಾಲದಲ್ಲಿ ಸಂಭವಿಸುತ್ತಿರುವ ತೀವ್ರ ಸಮುದ್ರ ಕೊರೆತ ಪ್ರದೇಶಗಳಲ್ಲಿ ತುರ್ತು ಸಂರಕ್ಷಣೆ ತಡೆಗೋಡೆ ನಿರ್ಮಿಸಲಾಗುತ್ತಿದೆ.

ಇ) ಕಳೆದ 5 ವರ್ಷಗಳಲ್ಲಿ ಖರ್ಚು ಮಾಡಿರುವ ಹಣ: